ಈ ಅಂಗಡಿಗಳು ಮೊದಲ ಸಂಜೆಗೆ ಹುಟ್ಟಿ, ಗಾಢ ಸಂಜೆಯಲ್ಲಿ ಬೆಳೆದು, ಕಡುಕತ್ತಲಲಿ ಇಲ್ಲವಾಗಿ ಬಿಡುತ್ತವೆ. ಅಲ್ಲೊಂದು ಸಂಜೆಯಿದೆ. ಅಲ್ಲೂ ಮಬ್ಬುಗತ್ತಲಿದೆ. ಅದು ಸೃಷ್ಟಿಸಿಕೊಂಡ ಸಂಜೆ. ತೆಳು ನೀಲಿ ಸಂಜೆ ಅದು. ಯಾರ ಮುಖವೂ ಅಲ್ಲಿ ಯಾರಿಗೂ ಸ್ಪಷ್ಟವಿಲ್ಲ. ಅಲ್ಲಿ ಕುಣಿಯುವವರು ಇದ್ದಾರೆ, ಕುಣಿಸುವವರೂ ಇದ್ದಾರೆ. ಅದು ಬಾರಿನ ಮಬ್ಬು, ಪಬ್ಬುಗಳ ಕೃತಕ ಸಂಜೆ. ಅದು ಮಬ್ಬು ಬೆಳಕಿನ ಲೋಕ.

ಈ ಬದುಕು ಮೋಸ ಮಾಡಿತು ಅಂತ ಒಬ್ಬ ಕುಡೀತಾನೆ. ಇನ್ನೊಬ್ಬ ಈ ಬದುಕು ನನಗೆ ಯಾಕೋ ಮೋಸ ಮಾಡಲಿಲ್ಲ ಅಂತ ಕುಡೀತಾನೆ. ಒಬ್ಬ ಅಳುತ್ತಾ ಕುಡಿದು ಕೊನೆಗೆ ನಗುತ್ತಾನೆ. ಇನ್ನೊಬ್ಬ ನಗುತ್ತಾ ಕುಡಿದು ಕೊನೆಗೆ ಅಳುತ್ತಾನೆ. ಅದು ಸಂಜೆಯ ಅರಿವು ಮತ್ತು ಅದು ಸಂಜೆಯಷ್ಟೇ ಕ್ಷಣಿಕ. ಮತ್ತೊಂದು ಸಂಜೆ, ಮತ್ತೊಂದು ಅರಿವು. ಸರಿಯಾಗಿ ಸಂಜೆಗೆ ಅವನು ಊಟದ ಬಾಕ್ಸ್ ತಗೊಂಡು ಮನೆ ಬಿಡುವನು. ಆರಕ್ಕೆ ಡ್ಯೂಟಿ. ಇಡೀ ರಾತ್ರಿ ಬಸ್ ಓಡಿಸಬೇಕು.

ಅವರ ಪಾಲಿಗೆ ಸಂಜೆಯೇ ಬೆಳಗು. ಬೆಳಗು ಅಂತ ಇರೋದು ಅವರಿಗೆ ಸಂಜೆ. ಎರಡರಲ್ಲೂ ಮುಬ್ಬು ಬೆಳಕು. ಒಂದರಲ್ಲಿ ಹೂವು ಅರಳುತ್ತದೆ. ಇನ್ನೊಂದರಲ್ಲಿ ಹೂವು ಉದುರುತ್ತದೆ. ಇಲ್ಲಿ ಹೂವು ಉದುರುವ ಹೊತ್ತಿಗೆ ಅಲ್ಲಿ ಅವರ ಡ್ಯೂಟಿ ಶುರು. ನಿಂತ ಬಸ್ಸಿನ ಗಾಲಿಗೆ ಎರಡು ಬಾರಿ ಡಬ್ ಡಬ್ ಹೊಡೆದು ಅದರಿಂದ ಇಡೀ ರಾತ್ರಿಯ ಡ್ಯೂಟಿಗೆ ಅಭಯಹಸ್ತ ಪಡೆಯುತ್ತಾನೆ. ನೈಟ್ ಡ್ಯೂಟಿಯ ನರ್ಸ್ ನಾಳೆ ಡಿಸ್ಚಾರ್ಜ್ ಆಗಿ ಹೋಗುವ ರೋಗಿಯ ಕಣ್ಣೆಳಕಿನಿಂದ ರಾತ್ರಿ ಪೂರ ಬೇಕಾದ ಹುರುಪು ಪಡೆಯುತ್ತಾಳೆ. ಐಟಿ ಹುಡುಗಿ ಕೀಬೋರ್ಡಿನ ಕಟ್ ಕಟ್ ಸದ್ದಿನಿಂದಲೇ ಇಡೀ ರಾತ್ರಿ ಖುಷಿಯಿಂದ ತಳ್ಳುತ್ತಾಳೆ. ಇವರೆಲ್ಲರನ್ನೂ ಸಂಜೆಯೇ ಸಲಹುತ್ತದೆ.



ಸಂಜೆ ಎಂಬುದು ನಿರಾಳ. ಸಂಜೆ ಎಂಬುದು ಆತಂಕವೂ. ಸಂತೆ. ಇನ್ನೂ ನಾಲ್ಕು ಕೆಜಿ ಟೊಮ್ಯಾಟೊ ಉಳಿದಿದೆ. ಎರಡು ರೂಪಾಯಿ ಕಡಿಮೆಗೆ ಮಾರಿ ಬಿಡಲೇ? ಅವನ ಯೋಚನೆ. ಬೆಳಗ್ಗೆಯಿಂದ ವ್ಯಾಪಾರ ಎಣಿಸುತ್ತಾನೆ. ಅಷ್ಟೇನು ಲಾಭವಿಲ್ಲ. ಈ ಸಂಜೆ ಸ್ವಲ್ಪ ತಡವಾಗಿ ಬರಬಾರದಿತ್ತೆ... ಇದು ಅವನ ಯೋಚನೆ. ಕೆಲವರು ಬೇಕು ಅಂತಲೇ ಸಂತೆಗೆ ಸಂಜೆ ಬರುತ್ತಾರೆ. ಮೂರು ರೂಪಾಯಿ ಕಡಿಮೆ ಕೇಳುತ್ತಾರೆ. ಮಾರುವವನಿಗೆ ಮಗನ ಮುದ್ದು ಮುಖ ನೆನಪಾಗುತ್ತದೆ. ಬೇಗ ಹೊರಡಬೇಕು. ಹೀಗೆ ಮಾರಿದರೆ ನಷ್ಟ. ಆದರೂ ಸಂಜೆಗೊಂದು ಶಾಪ ನೀಡಿ ಮೂರು ರೂಪಾಯಿ ಕಡಿಮೆಗೆ ಮಾರುತ್ತಾನೆ.

ಬಡವರ ಪಾಲಿಗೆ ಸಂಜೆಯ ಸಂತೆಗಳು ವರ. ಅಲ್ಲಿ ಎಲ್ಲವೂ ಸೋವಿ. ಮಾರುವವರು ಸೋತಿದ್ದಾರೆ. ಈಗಾಗಲೇ ಸೋತವರು ಕೊಳ್ಳಲು ಬಂದಿದ್ದಾರೆ. ಬಡವರಿಂದ ಬಡವರಿಗಾಗಿ ಈ ಸಂಜೆಯ ಸಂತೆಗಳು. ಹೊಲದಲ್ಲಿ ದಿನವಿಡೀ ತರಕಾರಿ ಬಿಡಿಸಿ ಬುಟ್ಟಿಯಲ್ಲಿ ಅವರು ಬರೀ ತರಕಾರಿಗಳನ್ನು ತುಂಬುವುದಿಲ್ಲ. ಸಂಜೆಯನ್ನು ತುಂಬಿರುತ್ತಾರೆ. ಯಾವುದೋ ಹೈವೆ ಸುತ್ತಿ... ಇನ್ ಯಾವುದೋ ನಿಲ್ದಾಣ ತಲುಪಿ.. ಯಾರ ಅಡುಗೆ ಮನೆ ಸೇರಬೇಕೋ.. ಅವು. ಸಂಜೆ ಹೊತ್ತಿನಲ್ಲಿ ತರಕಾರಿ ಮಾರುವವರು ಬರೀ ತರಕಾರಿ ಮಾರುವುದಿಲ್ಲ ಇಷ್ಟಿಷ್ಟೇ ಸಂಜೆಯನ್ನೂ ಮಾರುತ್ತಾರೆ. ಬೆಳಕು ಹಂಚುತ್ತಾರೆ.

ಮುರಿದ ಕಿಟಕಿಯಿಂದ ಆ ಪೋರನನ್ನು ಕದ್ದು ನೋಡಿದ ಈ ಹಣ್ಣಾದ ಸೂರ್ಯ ಬಳಪ, ಸ್ಲೇಟು, ನೆಗ್ಗಿದ ಊಟದ ತಟ್ಟೆಯನ್ನು ಬ್ಯಾಗ್‌ಗೆ ತುಂಬಿಕೊಳ್ಳುವ ಹೈದನ ಅವಸರ ಕಂಡು ತನ್ನ ದಿನದಾಯಸ್ಸು ನೆನಪಿಸಿಕೊಳ್ಳುತ್ತಾನೆ. ಪೋರ ಮನೆ ತಲುಪುವ ಹೊತ್ತಿಗೆ ಸೂರ್ಯ ಕಡಲಿನ ಕಡೆ ನಡೆಯುತ್ತಾನೆ.